# ಶರಣ ಸಂಕುಲ: ಸಾಮಾಜಿಕ ನ್ಯಾಯದ ಪರಿಕಲ್ಪನೆ.

**ಡಾ. ಮಣೂರ ಸುಧಾರಾಣಿ ಶಿವಪ್ಪಾ**
ಅತಿಥಿ ಉಪನ್ಯಾಸಕಿ
ಕನ್ನಡ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ.

**Article Link: https://aksharasurya.com/2023/09/manur-sudharani-shivappa/**

## ABSTRACT:

ಸಾಮಾಜಿಕ ನ್ಯಾಯಕ್ಕಾಗಿ ನಾವು ಮಾನವ ಹಕ್ಕುಗಳ ಕಡೆಗೆ ಗಮನ ಹರಿಸಿದಾಗ ಮತ್ತೆ ಮತ್ತೆ ನಮಗೆ ಶರಣರು ಬಹಳ ವಿಶಿಷ್ಟವಾಗಿ ಕಾಣುತ್ತಾರೆ. ಶರಣ ಸಂಕುಲ ಅನ್ನೋದು ಬಸವಣ್ಣನವರ ನವಸಮಾಜ. ಅಸ್ಪೃಶ್ಯರು, ಮಹಿಳೆಯರು, ಬಡವರು ಮತ್ತು ಎಲ್ಲ ಕಾಯಕಜೀವಿಗಳು ಸರ್ವಸಮಾನತೆಯನ್ನು ಆ ಶರಣ ಸಂಕುಲದಲ್ಲಿ ಅನುಭವಿಸಿದರು. ಎಲ್ಲ ಜಾತಿಗಳ ಎಲ್ಲ ಜನರನ್ನು ತೆಗೆದುಕೊಂಡು ಹೊಸ ಮಾನವನನ್ನು ಶರಣರು ಸೃಷ್ಟಿಸಿದರು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತ, ಸಮಾಜದ ಕಟ್ಟಕಡೆಯ ಮನುಷ್ಯರನ್ನು ಮೊಟ್ಟ ಮೊದಲು ಗುರುತಿಸುವುದು ಶರಣರ ಸಾಮಾಜಿಕ ನ್ಯಾಯದ ಪರಿಕಲ್ಪನೆಯಾಗಿದೆ. ಉಳ್ಳವರ ಮತ್ತು ಬಡವರ ಬಗ್ಗೆ ಅರಿವು ಮೂಡಿದಾಗ ಸಾಮಾಜಿಕ ವೈರುಧ್ಯಗಳು ಸ್ಪಷ್ಟವಾಗಿ ಗೋಚರಿಸುವವು. ಒಂದು ಸಮಾಜಕ್ಕೆ ನ್ಯಾಯ ಒದಗಿಸಬೇಕಾದರೆ ಈ ರೀತಿಯಾಗಿ ಸಮಾಜದಲ್ಲಿನ ವೈರುಧ್ಯಗಳನ್ನು ಗುರುತಿಸಬೇಕಾಗುತ್ತದೆ. ಸಕಲ ಜೀವಾತ್ಮರಿಗೆ ಒಳ್ಳೆಯದನ್ನು ಬಯಸುತ್ತಲೇ ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ವೈರುಧ್ಯಗಳನ್ನು ಗುರುತಿಸುವ ಕ್ರಿಯೆ ಬಹಳ ಗುರುತರವಾದುದು. ಇಂತಹ ಅದ್ವಿತೀಯವಾದ ಚಿಂತನಾ ಕಾಣಿಕೆಯನ್ನು ಶರಣರು 12ನೇ ಶತಮಾನದಲ್ಲಿಯೇ ನೀಡಿದ್ದು ಐತಿಹಾಸಿಕವಾಗಿದೆ. ಎಲ್ಲ ರೀತಿಯ ಅಸಮಾನತೆಯನ್ನು ಮೆಟ್ಟಿ ನಿಂತು ಮಾನವ ಹಕ್ಕುಗಳ ಧ್ವಜವನ್ನು ಹಾರಿಸಿದ ಸಮಾಜವನ್ನು ಮೊದಲ ಬಾರಿಗೆ ಈ ಭೂಮಿಗೆ ತಂದರು.

## KEYWORDS:

ವಚನ ಸಾಹಿತ್ಯ, ಸಮಸಮಾಜ, ಸಾಮಾಜಿಕ ನ್ಯಾಯ, ಸಾಮಾಜಿಕ ವೈರುಧ್ಯಗಳು, ವರ್ಗಪ್ರಜ್ಞೆ.

ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತ, ಸಮಾಜದ ಕಟ್ಟಕಡೆಯ ಮನುಷ್ಯರನ್ನು ಮೊಟ್ಟ ಮೊದಲು ಗುರುತಿಸುವುದು ಶರಣರ ಸಾಮಾಜಿಕ ನ್ಯಾಯದ ಪರಿಕಲ್ಪನೆಯಾಗಿದೆ. ಇಡೀ ಜಗತ್ತಿನಲ್ಲಿ ಮೊಟ್ಟ ಮೊದಲ ಬಾರಿಗೆ ಬಸವಣ್ಣನವರು ಮನುಷ್ಯರನ್ನು ವರ್ಗಗಳಾಗಿ ವಿಂಗಡಿಸುತ್ತಾರೆ. 12ನೇ ಶತಮಾನದಲ್ಲಿ ಬಸವಣ್ಣನವರು 'ಉಳ್ಳವರು ಶಿವಾಲಯವ ಮಾಡಿಹರು ನಾನೇನು ಮಾಡಲಿ ಬಡವನಯ್ಯ' ಎಂದು ಕೇಳಿದರು. ಈ ಉಳ್ಳವರ ಮತ್ತು ಬಡವರ ಬಗ್ಗೆ ಅರಿವು ಮೂಡಿದಾಗ ಸಾಮಾಜಿಕ ವೈರುಧ್ಯಗಳು ಸ್ಪಷ್ಟವಾಗಿ ಗೋಚರಿಸುವವು. ಒಂದು ಸಮಾಜ-ಕ್ಕೆ ನ್ಯಾಯ ಒದಗಿಸಬೇಕಾದರೆ ಈ ರೀತಿಯಾಗಿ ಸಮಾಜದಲ್ಲಿನ ವೈರುಧ್ಯಗಳನ್ನು ಗುರುತಿಸಬೇಕಾಗುತ್ತದೆ. ಸಾಮಾಜಿಕ ವೈರುಧ್ಯಗಳನ್ನು ಗುರುತಿಸಲು ವರ್ಗಪ್ರಜ್ಞೆ ಅವಶ್ಯಕವಾಗಿದೆ ಎಂಬುದನ್ನು ಬಸವಣ್ಣನವರು ಇಡೀ ಜಗತ್ತಿಗೆ ಮೊದಲ ಬಾರಿಗೆ ತೋರಿಸಿಕೊಟ್ಟರು. ಸಕಲ ಜೀವಾತ್ಮರಿಗೆ ಒಳ್ಳೆಯದನ್ನು ಬಯಸುತ್ತಲೇ ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ವೈರುಧ್ಯಗಳನ್ನು ಗುರುತಿಸುವ ಕ್ರಿಯೆ ಬಹಳ ಗುರುತರವಾದುದು. ಇಂತಹ ಅದ್ವಿತೀಯವಾದ ಚಿಂತನಾ ಕಾಣಿಕೆಯನ್ನು ಶರಣರು 12ನೇ ಶತಮಾನದಲ್ಲಿಯೇ ನೀಡಿದ್ದು ಐತಿಹಾಸಿಕವಾಗಿದೆ.

ಶರಣರ ದೃಷ್ಟಿಯಲ್ಲಿ ಕಣ್ಣಿಗೆ ಕಾಣುವ ಜಗತ್ತೆಲ್ಲ ಸಕಲ ಜೀವಾತ್ಮ-ರಿಂದ ಕೂಡಿರುವ ಮಹಾಮನೆ. ಬಸವದರ್ಶನದಲ್ಲಿ ಮಾನವರು ಮನೆಯಿಂದ ಮಹಾಮನೆಯ ಕಡೆಗೆ ಸಾಗುತ್ತಾರೆ. ನಮ್ಮ ಶರೀರ ಒಂದು ಮನೆಯಾದರೆ ಇಡೀ ಜಗತ್ತು ಮಹಾಮನೆ. ಅಂತರಂಗ ಶುದ್ಧಿಯಿಂದ ಪ್ರಾರಂಭಿಸಿ ಬಹಿರಂಗ ಶುದ್ಧಿಯ ಕಡೆಗೆ ಹೋಗಲು ಮಾರ್ಗದರ್ಶನ ಮಾಡುವ ದರ್ಶನವೇ ಬಸವದರ್ಶನ. ಗುಣಜ್ಞಾನವಿಲ್ಲದೇ ಅಂತರಂಗದ ಶುದ್ಧಿ ಇಲ್ಲ. ಸಪ್ತಶೀಲಗಳಿಂದ ಬರುವ ಈ ಗುಣಜ್ಞಾನವು ಸಮತಾ ಪ್ರಜ್ಞೆಗೆ ಮೂಲವಾಗಿದೆ. ಸಾಮಾಜಿಕ ನ್ಯಾಯವೆಂಬ ಬಹಿರಂಗ ಶುದ್ಧಿಗೆ ಮೂಲವಾದ ಸಮತಾ ಪ್ರಜ್ಞೆ ಇಲ್ಲದೆ ಆಚಾರಧರ್ಮವಿಲ್ಲ. ಇದಕ್ಕೆ 'ನಡೆನುಡಿ ಸಿದ್ಧಾಂತ' ಎಂದು ಕರೆಯುತ್ತಾರೆ. ಅರಿವನ್ನು ಪಡೆಯುವುದು, ಪಡೆದ ಅರಿವನ್ನು ಆಚರಣೆಗೆ ತರುವುದು. ಹೀಗೆ ವಿಚಾರವನ್ನು ಆಚರಣೆಗೆ ತರುವ ಕ್ರಮವನ್ನು ಶರಣರು ನಮಗೆ ತಿಳಿಸಿದ್ದಾರೆ.

ಇದನ್ನು ಸಾಧಿಸುವುದಕ್ಕಾಗಿ ಶರಣರು ನಾಲ್ಕು ಸಾಮಾಜಿಕ ಅಂಶಗಳ ಕಡೆಗೆ ಗಮನ ಸೆಳೆಯುತ್ತಾರೆ. ಲಿಂಗಭೇದವಿಲ್ಲದ, ಜಾತಿ ಮತ್ತ ವರ್ಣಭೇದವಿಲ್ಲದ ಹಾಗೂ ವರ್ಗಭೇದವಿಲ್ಲದ ಸಮಾಜದಲ್ಲಿ ಮಾತ್ರ ನಾವು ಇಂಥ ಸಾಮಾಜಿಕ ನ್ಯಾಯವನ್ನು ಕಾಣಲು ಸಾಧ್ಯವಿದೆ. ಈ ವಿಚಾರವನ್ನು ಮನಗಾಣಿಸಲು ಶರಣರು ಅನೇಕ ವಚನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಬಸವಣ್ಣನವರ ಒಂದು ವಚನ:

**ಲಿಂಗವ ಪೂಜಿಸಿ ಫಲವೇನಯ್ಯ? ಸಮರತಿ ಸಮಕಳೆ**
**ಸಮಸುಖವ ಅರಿಯದನ್ನಕ್ಕ**
**ಲಿಂಗವ ಪೂಜಿಸಿ ಫಲವೇನಯ್ಯ?**
**ಕೂಡಲ ಸಂಗಮದೇವರ ಪೂಜಿಸಿ ನದಿಯೊಳಗೆ ನದಿ**
**ಬೆರಸಿದಂತಾಗದನ್ನಕ್ಕ?**

ಫಲಾಪೇಕ್ಷೆ ಇಲ್ಲದೆ ಕರ್ಮ ಮಾಡು ಎಂದು ಶರಣರು ಹೇಳುವುದಿಲ್ಲ. ಲಿಂಗಪೂಜೆಯಲ್ಲಿ ಕೂಡ ಅವರು ಫಲವನ್ನು ಬಯಸುತ್ತಾರೆ. ಲಿಂಗಪೂಜೆಯ ಫಲ ಯಾವುದು ಎಂಬುದನ್ನು ಅವರು ವಿವರಿಸುತ್ತಾರೆ. 21ನೇ ಶತಮಾನದ ಇಡೀ ಜಗತ್ತಿಗೆ ಬೇಕಾದ ವಚನವಿದು.

ಸಮರತಿ ಎಂದರೆ ಲಿಂಗ ಸಮಾನತೆ, ಸಮಕಳೆ ಎಂದರೆ ಮಾನವಕುಲಕ್ಕೆ ಇರುವ ತೇಜಸ್, ಸಮಸುಖ ಎಂದರೆ ನಿಸರ್ಗದಲ್ಲಿ ಬಡವರು ಮತ್ತ ಶ್ರೀಮಂತರು ಪಡೆಯುವ ಒಂದೇ ತೆರನಾದ ಸುಖ. ಲಿಂಗಭೇದ ಮಾಡುತ್ತ ಹೆಣ್ಣನ್ನು ಕೀಳಾಗಿ ಕಾಣವುದು ಸಲ್ಲದು. ಒಳಗಿರುವ ಆತ್ಮಕ್ಕೆ, ಭಾವಕೋಶಕ್ಕೆ ಮತ್ತು ಜ್ಞಾನಕ್ಕೆ ಹೆಣ್ಣು ಗಂಡೆಂಬ ಭೇದವಿಲ್ಲ.

ಮಾನವ ಕುಲಕ್ಕೆ ಮಾನವ ಕಳೆ ಮಾತ್ರ ಇದೆ. ಬ್ರಹ್ಮ ತೇಜಸ್ (ಕಳೆ), ಕ್ಷಾತ್ರ ತೇಜಸ್ (ಕಳೆ) ಎನ್ನುವುದು ಮಾನವ ನಿರ್ಮಿತವೇ ಹೊರತಾಗಿ ನಿಸರ್ಗ ನಿರ್ಮಿತವಲ್ಲ. ಭೇದಭಾವ ಮಾಡದ ನಿಸರ್ಗವು ಇಡೀ ಜೀವಸಂಕುಲಕ್ಕೆ ಸಮನಾದ ಸುಖ ಕೊಟ್ಟಿದೆ. ಗಾಳಿ, ಬೆಳಕು, ಬೆಳದಿಂಗಳು, ತಂಪು, ಬಿಸಿ, ಹಣ್ಣು – ಹಂಪಲುಗಳ ರುಚಿ ಹೀಗೆ ಯಾವುದನ್ನು ತೆಗೆದುಕೊಂಡರೂ ಬಡವ ಶ್ರೀಮಂತ ಎನ್ನದೆ ಸಮನಾಗಿ ನೋಡಿಕೊಂಡಿದೆ.

ಲಿಂಗಭೇದ, ಜಾತಿಭೇದ, ವರ್ಣಭೇದ, ವರ್ಗಭೇದ ಮುಂತಾದ ಭೇದಗಳು ಕೃತ್ರಿಮವಾದುವು. ಆದ್ದರಿಂದ ಲಿಂಗಭೇದ ಇರಬಾರದು, ಜಾತಿ ಮತ್ತು ವರ್ಣಭೇದ ಇರಬಾರದು ಹಾಗೂ ವರ್ಗಭೇದ ಇರಬಾರದು ಎಂಬ ಅರಿವನ್ನು ವಚನದ ಮೊದಲೆರಡು ಸಾಲುಗಳು ಮೂಡಿಸುತ್ತವೆ. ಇಂಥ ಅರಿವೇ ಲಿಂಗಪೂಜಾ ಫಲ. ಹೀಗೆ ಸಮರತಿ ಸಮಕಳೆ ಮತ್ತು ಸಮಸುಖವನ್ನು ಅರಿಯದಿದ್ದರೆ ಲಿಂಗಪೂಜಾ ಫಲವಿಲ್ಲ ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಸಾಮಾಜಿಕ ನ್ಯಾಯ ಲಭಿಸಬೇಕಾದರೆ ಮಾನವ ಕುಲ ಒಂದು ಎಂಬುದನ್ನು ತಿಳಿದುಕೊಳ್ಳಬೇಕು ಎಂಬುದು ನಾಲ್ಕನೆಯ ಅಂಶ. ಈ ವಿಚಾರವನ್ನು ವಚನದ ಮುಂದಿನ ಸಾಲುಗಳಲ್ಲಿ ತಿಳಿಸಿದ್ದಾರೆ. 'ಲಿಂಗವ ಪೂಜಿಸಿ ಫಲವೇನಯ್ಯ? ಕೂಡಲಸಂಗಮ ದೇವರ ಪೂಜಿಸಿ ನದಿಯೊಳಗೆ ನದಿ

ಬೆರಸಿದಂತಾಗದನ್ನಕ್ಕ' ಎಂದು ಹೇಳವಲ್ಲಿ ಮಾನವ ಕುಲದ ಏಕತೆಯ ಪಾಠವಿದೆ. ನದಿಯೊಳಗೆ ನದಿ ಕೂಡಿದಾಗ ಅವು ಹೇಗೆ ಅಭೇದ್ಯವಾಗುವವೋ ಹಾಗೆ ಮಾನವಕುಲ ಎಲ್ಲ ವರ್ಣ ಮತ್ತು ಜನಾಂಗ ಭೇದಗಳನ್ನು ಮೀರಿ ಒಂದಾಗಬೇಕು ಎಂಬುದು ಶರಣರ ಆಶಯವಾಗಿದೆ.

ವರ್ಗ, ಲಿಂಗ, ಜಾತಿ, ವರ್ಣ, ಧರ್ಮ, ದೇಶ, ಭಾಷೆಗಳು ಬೇರೆ ಬೇರೆಯಾದರೂ ಮಾನವಕುಲ ಒಂದೇ ಎಂಬ ಸತ್ಯದ ದರ್ಶನ ಈ ವಚನದಿಂದ ಆಗುತ್ತದೆ. ಈ ಸತ್ಯವನ್ನು ಅರಿತುಕೊಂಡಾಗ ಮಾತ್ರ ಸಾಮಾಜಿಕ ನ್ಯಾಯ ಕೊಡಲು ಮತ್ತು ಪಡೆಯಲು ಸಾಧ್ಯವಾಗುವುದು. ಸಾಮಾಜಿಕ ನ್ಯಾಯಕ್ಕಾಗಿ ನಾವು ಮಾನವ ಹಕ್ಕುಗಳ ಕಡೆಗೆ ಗಮನ ಹರಿಸಿದಾಗ ಮತ್ತೇ ಮತ್ತೇ ನಮಗೆ ಶರಣರು ಬಹಳ ವಿಶಿಷ್ಟವಾಗಿ ಕಾಣುತ್ತಾರೆ. ಮಹಿಳೆಯರು, ದಲಿತರು ಮತ್ತ ಕಾಯಕಜೀವಿಗಳಿಗೆ ಐತಿಹಾಸಿಕವಾಗಿ ಎಂದೂ ನ್ಯಾಯ ಸಿಕ್ಕಿಲ್ಲ. ಶರಣರು ಮಾನವ ಹಕ್ಕುಗಳ ವಿಚಾರದಲ್ಲಿ ಎಲ್ಲ ರೀತಿಯ ಜನರಿಗೆ ಸ್ಪಂದಿಸಿದ್ದಾರೆ. ಈ ಸ್ಪಂದನ ಇಡೀ ಮಾನವಕುಲಕ್ಕೆ ಮಾದರಿಯಾಗಿದೆ.

ಮಹಿಳೆಯರ, ಕಾರ್ಮಿಕರ ಮತ್ತು ಕರಿಯರ ಹಕ್ಕಗಳ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಯಾರಿಗೂ ಕನಸು ಕೂಡ ಬೀಳದ 12ನೇ ಶತಮಾನದಲ್ಲಿ ಶರಣ–ರು ಈ ಎಲ್ಲರ ಹಕ್ಕುಗಳ ಬಗ್ಗೆ ಮಾತನಾಡಿದ್ದು ವಿಶ್ವದ ಇತಿಹಾಸದ ಪುಟಗಳಲ್ಲಿ ಸೇರಬೇಕಾಗಿದೆ. ಅಹಿಂಸಾ ಹೋರಾಟದ ಮೂಲಕ ಸಾಮಾಜಿಕ ನ್ಯಾಯವನ್ನು ಸಾಧಿಸಬೇಕಾದ ಕಲೆಯನ್ನು ಶರಣರು ಕಲಿಸಿದ್ದಾರೆ. ಸಾಮಾಜಿಕ ನ್ಯಾಯಕ್ಕೆ ಪ್ರತಿ–ಕೂಲವಾದ ಲಿಂಗಭೇದ, ಜಾತಿ ಮತ್ತು ವರ್ಣಭೇದ ಹಾಗೂ ವರ್ಗಭೇದಗಳನ್ನು ರಕ್ಷಿಸುತ್ತ ಮಾನವ ಏಕತೆಯನ್ನು ಸಾಧಿಸಲಿಕ್ಕಾಗದು ಎಂದು ಶರಣರು ಪ್ರತಿಪಾದಿಸಿದ್ದಾರೆ.

ಶರಣ ಸಂಕುಲ ಅನ್ನೋದು ಬಸವಣ್ಣನವರ ನವಸಮಾಜ. ಜಗತ್ತಿನ ಮೊಟ್ಟ ಮೊದಲ ಪ್ರಯೋಗ ಇದು. ಎಲ್ಲಿ ಕುಲಗಳಿಲ್ಲವೋ, ಎಲ್ಲಿ ಜಾತಿಗಳಿಲ್ಲಿವೋ, ಎಲ್ಲಿ ಲಿಂಗಭೇದವಿಲ್ಲವೋ, ಎಲ್ಲಿ ವರ್ಗಭೇದವಿಲ್ಲವೋ ಅದಕ್ಕೆ ಸಂಕುಲ ಎನ್ನುವರು. ಈ ರೀತಿಯ ಒಂದು ಮಾದರಿ ಸಮಾಜವನ್ನು ಶರಣರು 12ನೇ ಶತಮಾನದಲ್ಲಿ ನಿರ್ಮಿಸಿದರು. ಅಸ್ಪೃಶ್ಯರು, ಮಹಿಳೆಯರು, ಬಡವರು ಮತ್ತು ಎಲ್ಲ ಕಾಯಕಜೀವಿಗಳು ಸರ್ವಸಮಾನತೆಯನ್ನು ಆ ಶರಣ ಸಂಕುಲದಲ್ಲಿ ಅನುಭವಿಸಿದರು. ಬ್ರಾಹ್ಮಣ ಮಧುವರಸರು ಶರಣರಾಗುವ ಮೂಲಕ ಮೇಲ್ಜಾತಿಯ ಅಹಂಕಾರದಿಂದ ಮುಕ್ತರಾದರು. ಸಮಗಾರ ಹರಳಯ್ಯನವರು ಶರಣರಾಗುವ ಮೂಲಕ ಕೆಳಜಾತಿಯ

ಕೀಳರಿಮೆಯಿಂದ ಮುಕ್ತರಾದರು. ಹೀಗೆ ವಿವಿಧ ಜಾತಿಗಳ ಸಂಕರವಾದಂಥ ಶರಣ ಸಂಕುಲ ವಿಶ್ವಕ್ಕೇ ಮಾದರಿಯಾಯಿತು. ಕುಲವನರಸುವರೆ ಶರಣರಲ್ಲಿ ಜಾತಿ ಸಂಕರವಾದ ಬಳಿಕ? ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ.

ಎಲ್ಲ ಜಾತಿಗಳ ಎಲ್ಲ ಜನರನ್ನು ತೆಗೆದುಕೊಂಡು ಹೊಸ ಮಾನವನನ್ನು ಶರಣರು ಸೃಷ್ಟಿಸಿದರು. ಶರಣ ಎಂದರೆ ನವಮಾನವ. ಈ ಜಗತ್ತಿನಲ್ಲಿ ಯಾರಾದರೂ ನವಮಾನವರಿದ್ದರೆ, ನಮ್ಮ ನೆಲದಲ್ಲಿ ಹುಟ್ಟಿದ ಶರಣರು. ಏಕೆಂದರೆ ಅವರು ಲಿಂಗಭೇದ ಮಾಡಲಿಲ್ಲ, ವರ್ಗಭೇದ ಮಾಡಲಿಲ್ಲ, ಜಾತಿಭೇದ ಮಾಡಲಿಲ್ಲ ಮತ್ತು ವರ್ಣಭೇದ ಮಾಡಲಿಲ್ಲ. ಹೀಗೆ ಅವರು ತಮ್ಮ ಬದುಕಿನಲ್ಲಿ ಸಮಾನತೆ ಸಾಧಿಸಿದರು. ಎಲ್ಲ ರೀತಿಯ ಅಸಮಾನತೆಯನ್ನು ಮೆಟ್ಟಿ ನಿಂತು ಮಾನವ ಹಕ್ಕುಗಳ ಧ್ವಜವನ್ನು ಹಾರಿಸಿದ ಸಮಾಜವನ್ನು ಮೊದಲ ಬಾರಿಗೆ ಈ ಭೂಮಿಗೆ ತಂದರು. ಇಲ್ಲಿ ಎಲ್ಲರೂ ತಮ್ಮ ಮತ್ತು ಇತರರ ಜಾತಿಗಳನ್ನು ಮನಸ್ಸಿನಿಂದ ಅಳಿಸಿಹಾಕಿ ಕಾಯಕ ಉಳಿಸಿಕೊಂಡರು. ಸಮಗಾರ ಹರಳಯ್ಯ ಎಂದು ಹೇಳವಲ್ಲಿ ಸಮಗಾರ ಎಂಬುವುದು ಜಾತಿ ಅಲ್ಲ ಕಾಯಕ ಎಂಬುದನ್ನು ತೋರಿಸಿಕೊಟ್ಟರು. ಗಂಡ–ಹೆಂಡಿರಲ್ಲಿ ಮೇಲು ಕೀಳಿನ ಅನುಚರ ಭಾವ ಹೋಗಿ ಸಮಾನತೆಯ ಸಹಚರ ಭಾವ ಮೂಡಿತು. ಹೀಗೆ ವರ್ಣ, ವರ್ಗ, ಜಾತಿ, ಕುಲ, ಕಾಯಕ ಮತ್ತು ಲಿಂಗಭೇದಗಳಿಲ್ಲದೆ ಎಲ್ಲರನ್ನು ಒಂದಾಗಿಸಿ ಸಮಾನತೆ ಸಾಧಿಸಿದ್ದು ಮಾನವ ಇತಿಹಾಸದ ಬಹುಮುಖ್ಯ ಘಟನೆಗಳಲ್ಲಿ ಒಂದಾಗಿದೆ. ಹೀಗೆ ಶರಣರು ಸಾಮಾಜಿಕ ನ್ಯಾಯದೊಂದಿಗೆ ಈ ನೆಲದ ಮಾನವ ಹಕ್ಕುಗಳ ಮೂಲ ಪುರುಷರಾದರು.

**ಪರಾಮರ್ಶನ ಗ್ರಂಥಗಳು:**

1. ಡಾ. ಚನ್ನಕ್ಕ ಪಾವಟೆ, ಶರಣ ಸಂಸ್ಕೃತಿ: ಮುಖಾಮುಖಿ (ಮೇ 2004), ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠ, ಇಲಕಲ್.
2. ಡಾ. ವೀರಣ್ಣ ದಂಡೆ, ವಚನ ಸಾಹಿತ್ಯ ಮೀಮಾಂಸೆ (2007), ಬಸವ ಸಮಿತಿ, ಬಸವ ಭವನ, ಶ್ರೀ ಬಸವೇಶ್ವರ ರಸ್ತೆ, ಬೆಂಗಳೂರು.
3. ಡಾ. ಜಯಶ್ರೀ ದಂಡೆ (ಸಂ), ನಡುಗನ್ನಡ ಸಾಹಿತ್ಯ ಸಂಗ್ರಹ (2009), ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ–585106.
4. ಪ್ರೊ. ಸಿದ್ದಣ್ಣ ಲಂಗೋಟಿ (ಚಾಂದಕವಠೆ), ವಿಶ್ವಗುರು ಬಸವಣ್ಣನವರು (2016), ಪ್ರಸಾರಾಂಗ, ವಚನ ವಿಶ್ವವಿದ್ಯಾಲಯ, ಅನುಭವ ಮಂಟಪ, ಬಸವ ಕಲ್ಯಾಣ, ಬೀದರ.
5. ವ್ಹಿ.ಎಂ. ಥಾಲಬಾವಡಿ (ಸಂ), ಶರಣರ ವಚನಗಳಲ್ಲಿ ಬಸವಣ್ಣ (2006), ಉತ್ತರ ಕರ್ನಾಟಕ ಯುವ ಲೇಖಕರ ವೇದಿಕೆ, ಶಾಖೆ: ಇಂಡಿ–586209.
6. ಡಾ. ವಿಜಯಕುಮಾರಿ ಕರಿಕಲ್, ವಚನ ಸಾಹಿತ್ಯದಲ್ಲಿ ವೈಶಿಷ್ಟ್ಯತೆ (2009), ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು, ಮೈಸೂರು–23.
7. ಪ್ರೊ. ಎನ್. ಕೆ. ರಾಮಚಂದ್ರಪ್ಪ (ಸಂ), ಅಂಬಿಗರ ಚೌಡಯ್ಯನವರ ಸಮಾಜ ಮತ್ತು ಸಂಸ್ಕೃತಿ (ಡಿಸೆಂಬರ್ 2009), ಸಿಂಚನ ಪ್ರಕಾಶನ, ವಿದ್ಯಾನಗರ, ಪಶ್ಚಿಮ ಬಡಾವಣೆ, ಹಾವೇರಿ.